**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ**

ಸಿಸಿ.ನಂ.436/2022

| | | |
|---|---|---|
| ಸಾಕ್ಷಿಯ ಹೆಸರು | ಮಂಜುನಾಯಕ | |
| ತಂದೆಯ ಹೆಸರು | ಪುಟ್ಟಸ್ವಾಮಿನಾಯಕ | |
| ವಯಸ್ಸು | 42 ವರ್ಷ | |
| ಉದ್ಯೋಗ | ಆಟೋ ಚಾಲಕ | ಡಿ.ಡಬ್ಲ್ಯೂ 1 |
| ವಾಸ ಸ್ಥಳ | ಕೆ ಆರ್ ನಗರ | |

ದಿನಾಂಕಃ **21-01-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

1) ನನಗೆ ದೂರುದಾರರು ಪರಿಚಯ ಇರುತ್ತಾರೆ. ನಾನು ದೂರುದಾರರ ಬಳಿ 2020 ನೇ ಸಾಲಿನಲ್ಲಿ ಚೀಟಿ ವ್ಯವಹಾರ ಮಾಡಿರುತ್ತೇನೆ. ಚೀಟಿ ವ್ಯವಹಾರದ ಭದ್ರತೆಗಾಗಿ ನಾನು ನನ್ನ ಖಾತೆಗೆ ಸೇರಿದ 4 ಚೆಕ್ಕುಗಳನ್ನು ದೂರುದಾರರಿಗೆ ನೀಡಿರುತ್ತೇನೆ. ನಾನು, ನನ್ನ ತಂದೆ-ತಾಯಿ ಮತ್ತು ತಮ್ಮ ದೂರುದಾರರಿಗೆ ಒಂದು ಖಾಲಿ ಛಾಪಾ ಕಾಗದವನ್ನು ನೀಡಿರುತ್ತೇವೆ. ದೂರುದಾರರು ನಮ್ಮ ಕುಟುಂಬ ಸದಸ್ಯರ ವಿರುದ್ಧ ಸಿವಿಲ್ ದಾವೆ ಸಲ್ಲಿಸಿರುತ್ತಾರೆ. ಚೀಟಿ ಹಣವನ್ನು ನಾನು ಮರುಪಾವತಿ ಮಾಡಿದ್ದರು ಸಹ ನನ್ನ ವಿರುದ್ಧ ಪ್ರ ಕರಣ ದಾಖಲು ಮಾಡಿರುತ್ತಾರೆ.

2) ಅಸಲು ದಾವೆ 67/2024 ರ ಆದೇಶ ಪುಟದ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು.

3) ಅಸಲು ದಾವೆ 67/2024 ರ ವಾದ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು

ಸಿಸಿ.**ನಂ.436/2022**

4) ಸಿಸಿ ನಂ. 374/2022 ತೀರ್ಪಿನ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಯಿತು.

5) ದೃಡೀಕೃತ ಬ್ಯಾಂಕ್ ಸ್ಟೇಟಮೆಂಟ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು.

6) ಇಕ್ವಿಟಿಸ ಸ್ಮಾಲ್ ಪೈನಾನ್ಸ ಬ್ಯಾಂಕ್ ಸ್ಟೇಟಮೆಂಟ್ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರು ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.